ಭಾರತೀಯ ಸಂಸ್ಕೃತಿ ಉತ್ಸವ
ನಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
• VIJAYAVANI • VIJAYAPURA
2
ಶನಿವಾರ 29 ಡಿಸೆಂಬರ್ 2018
• 29 DECEMBER 2018

ಭಾರತೀಯ ಸಂಸ್ಕೃತಿ ಉತ್ಸವದ ಐದನೇ ದಿನವಾದ ಶುಕ್ರವಾರದಂದು ನಡೆದ ಯುವ ಸಂಗಮದಲ್ಲಿ ಹೈಸ್ಕೂಲ್- ಪದವಿಪೂರ್ವ ಕಾಲೇಜುಗಳ ತರುಣರು, ಪದವಿ- ಸ್ನಾತಕೋತ್ತರ ಪದವಿ ವಿದ್ಯಾರ್ಥಿ- ವಿದ್ಯಾರ್ಥಿನಿಯರು ಸಾವಿರಾರು ಸಂಖ್ಯೆಯಲ್ಲಿ ಉಪಸ್ಥಿತರಿದ್ದು, ಯುವಶಕ್ತಿಯ ಅಗಾಧತೆ, ಬದಲಾವಣೆ ತರುವ ಪರಿಯನ್ನು ಕಂಡು ವಿಸ್ಮಿತರಾದರು. ಸಾಧನೆ ಮಾಡುವ ತುಡಿತ, ಛಲ ಇದ್ದಲ್ಲಿ ಯಾವುದು ಅಸಾಧ್ಯವಲ್ಲ ಎಂದು ಯುವಸಂಗಮದಲ್ಲಿ ಭಾಗವಹಿಸಿದ್ದ ಬಹುತೇಕ ಗಣ್ಯರು ಒಕ್ಕೊರಲಿನ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನವ ಬಂಡವಾಳವೇ ಪ್ರಗತಿ ಮೂಲ

ಸಂಸ್ಕೃತಿ ಉತ್ಸವದಲ್ಲಿ ಯುವ ಶಕ್ತಿ ಸಂಗಮದ ವೈಭವ | ಡಾ.ಬಾಲಸುಬ್ರಮಣ್ಯಂ ಅಭಿಮತ

■ **ವಿಜಯವಾಣಿ ಸುದ್ದಿಜಾಲ** ವಿಜಯಪುರ

ದೇಶದ ಅಭಿವೃದ್ಧಿ ಮಾನವ ಬಂಡವಾಳದ ಸದ್ಬಳಕೆಯಲ್ಲಿ ಅಡಗಿದೆ. ಯಾವ ದೇಶ ಮಾನವ ಬಂಡವಾಳವನ್ನು ಸಮರ್ಪಕವಾಗಿ ಬಳಸಿಕೊಂಡಿದೆಯೋ ಆ ರಾಷ್ಟ್ರ ಅಧಿಕವಾಗಿ ಪ್ರಗತಿ ಹೊಂದಿರುತ್ತದೆ ಎಂದು ಹೆಗ್ಗಡದೇವನಕೋಟೆಯ ವಿವೇಕ್ ಅಧ್ಯಕ್ಷ ಡಾ. ಆರ್. ಬಾಲಸುಬ್ರಮಣ್ಯಂ ಹೇಳಿದರು.

ಕಗ್ಗೋಡದ ರಾಮನಗರಿಗೆ ವಾಹಿನಿ ಯತ್ನಾಳ ಗೋರಕ್ಷಾ ಕೇಂದ್ರದ ಆವರಣದಲ್ಲಿ ಭಾರತ ವಿಕಾಸ ಸಂಗಮ, ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಸಂಘ ಹಾಗೂ ವಿಜಯಪುರದ ಸಿದ್ಧೇಶ್ವರ ಸಂಸ್ಥೆ ನೇತೃತ್ವದಲ್ಲಿ ನಡೆಯುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಶುಕ್ರವಾರ ಹಮ್ಮಿಕೊಂಡ 'ಯುವ ಶಕ್ತಿ ಸಂಗಮ'ದಲ್ಲಿ ಅವರು ಮಾತನಾಡಿದರು. ಜಗತ್ತಿನ ಯಾವುದೇ ರಾಷ್ಟ್ರವನ್ನು ಉದಾಹರಣೆಗೆ ತೆಗೆದುಕೊಳ್ಳಿ ಎಲ್ಲಿ ಮಾನವ ಬಂಡವಾಳದ ಅಭಿವೃದ್ಧಿ ಆಗಿದೆಯೋ ಆ ರಾಷ್ಟ್ರ ಅಧಿಕವಾಗಿ ಅಭಿವೃದ್ಧಿ ಹೊಂದಿದೆ. ಆರ್ಥಿಕ ಬಂಡವಾಳಕ್ಕಿಂತ ಮಾನವ ಬಂಡವಾಳ ಬಳಸಿಕೊಳ್ಳುವ ಕೆಲಸವಾಗಬೇಕು. ಸ್ವಾಮಿ ವಿವೇಕಾನಂದರ ಆಶಯದಂತೆ ಯುವ ಸಿಂಹಗಳನ್ನು ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಬೇಕು ಎಂದರು.

ಮಾನವ ಬಂಡವಾಳವನ್ನು ದೈಹಿಕವಾಗಿ, ಮಾನಸಿಕವಾಗಿ ಅಭಿವೃದ್ಧಿಪಡಿಸಬೇಕು ಎಂದ ಅವರು, ಮಾನವ ಬಂಡವಾಳವನ್ನು ದೈಹಿಕವಾಗಿ ಅಭಿವೃದ್ಧಿ ಪಡಿಸಲು ಯೋಗ ತುಂಬ ಸಹಕಾರಿ. ಯೋಗ ಪ್ರಾಚೀನ ಕಾಲ ಹಂತದಲ್ಲೇ ಕಲ್ಯಾಣಗೊಳಿಸಬೇಕು. ಆದರೆ, ಕೆಲವರು ಅದಕ್ಕೆ ಕೇಸರೀಕರಣ ಪಟ್ಟ ಕಟ್ಟುತ್ತಿರುವುದು ದುರದೃಷ್ಟಕರ. ಆದರೆ ಅಮೆರಿಕದಲ್ಲಿ ಯೋಗಕ್ಕಾಗಿ 30 ಬಿಲಿಯನ್ ಡಾಲರ್ ಬಂಡವಾಳ ಹೂಡಿಕೆಯಾಗಿದೆ. ಯೋಗದಿಂದ ಮಾನವ ಬಂಡವಾಳ ಹೆಚ್ಚಿಸಿದ್ದು, ದೇಶದ ಆರ್ಥಿಕತೆಗೆ ಪೂರಕ ಎಂದರು.

ವಿಜಯಪುರ ತಾಲೂಕಿನ ಕಗ್ಗೋಡದಲ್ಲಿ ನಡೆದ ಯುವ ಶಕ್ತಿ ಸಂಗಮ ಕಾರ್ಯಕ್ರಮವನ್ನು ಸುನೀಲ ಶಾಸ್ತ್ರಿ ಉದ್ಘಾಟಿಸಿದರು. ಗಣ್ಯರು ಉಪಸ್ಥಿತರಿದ್ದರು.

ಅಪೌಷ್ಟಿಕತೆ ಕೊರತೆ

ಸ್ವಾತಂತ್ರ್ಯ ಬಂದು 70 ವರ್ಷಗಳು ಗತಿಸಿದರೂ ಶೇ.54 ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಶೇ.40 ರಷ್ಟು ಜನರಿಗೆ ಇಂದಿಗೂ ಶುದ್ಧ ಕುಡಿಯುವ ನೀರು ದೊರಕುತ್ತಿಲ್ಲ. ಅಭಿವೃದ್ಧಿಯ ಅಸಮತೋಲನ ಅಧಿಕವಾಗಿದೆ. ಆ ಅಧಿಗತೆ ಅಭಿವೃದ್ಧಿಗೆ ಗುಡ್ಡಗಾಡು ಹಾಗೂ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಮುಖ್ಯ. ದೇಶದ ಅಭಿವೃದ್ಧಿಯಲ್ಲಿ ಯುವಜನತೆ ಪಾತ್ರ ಪ್ರಮುಖ. ಹಗಲು ರಾತ್ರಿ ದೇಶಾಭಿವೃದ್ಧಿಯಲ್ಲಿ ಯುವ ಜನತೆ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ದೇಶದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ನಾವೆಲ್ಲ ಭಗತ್ ಸಿಂಗ್ ಮತ್ತೆ ಹುಟ್ಟಲಿ ಎಂದು ಆಶಿಸುತ್ತೇವೆ. ಆದರೆ ನಮ್ಮ ಮನೆಯಲ್ಲಲ್ಲ; ಪಕ್ಕದ ಮನೆಯಲ್ಲಿ ಆತ ಹುಟ್ಟಬೇಕು. ಏಕೆಂದರೆ ಯಾರೂ ತಮ್ಮ ಮಗ ಸನ್ಯಾಸಿ ಆಗಲಿ ಎಂದು ಭಾವಿಸುವುದಿಲ್ಲ. ಈ ಮನೋಭಾವ ಬದಲಾಗಬೇಕಿದೆ. ಪ್ರತಿ ಮನೆಯಿಂದ ದೇಶಾಭಿಮಾನದ ಕಹಳೆ ಮೊಳಗಬೇಕು ಎಂದು ಬಾಲಸುಬ್ರಮಣ್ಯಂ ಹೇಳಿದರು.

ಕಗ್ಗೋಡದಲ್ಲಿ ನಡೆದ ಯುವ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಡ್ರೋಣ್ ಸಂಶೋಧಕ ಎಂ.ಎನ್. ಪ್ರತಾಪ್ ಅವರನ್ನು ಸನ್ಮಾನಿಸಲಾಯಿತು.

ಮುಂದುವರಿದ ರಾಷ್ಟ್ರ

ಆರ್ಥಿಕ ಹಿಂಜರಿತದ ಕಾರಣದಿಂದಾಗಿ ಗ್ರೀಸ್, ಫ್ರಾನ್ಸ್ ಮುಂತಾದ ರಾಷ್ಟ್ರಗಳು ಅಧಿಕವಾಗಿ ಹಿನ್ನಡೆ ಅನುಭವಿಸಿದವು. ಐತಿಹಾಸಿಕ ಕಾಲಘಟ್ಟದಲ್ಲಿ ಆ ಎಲ್ಲ ರಾಷ್ಟ್ರಗಳು ಒಗ್ಗೂಡಿ ಯಾವ ರಾಷ್ಟ್ರ ನಿರಂತರವಾಗಿ ಪ್ರಗತಿ ಸಾಧಿಸುತ್ತಿದೆ ಎಂಬುದರ ಬಗ್ಗೆ ಅಧ್ಯಯನ ವರದಿ ಸಿದ್ಧ ಮಾಡಿ ಆ ರಾಷ್ಟ್ರದಿಂದ ಸಲಹೆ ಪಡೆಯುವ ಮಹತ್ವದ ಜವಾಬ್ದಾರಿಯನ್ನು ಖ್ಯಾತ ಅರ್ಥಶಾಸ್ತ್ರಜ್ಞ ಆ್ಯಂಗಸ್ ಮ್ಯಾಡಿಸನ್ ಅವರಿಗೆ ವಹಿಸಿತು. ಮ್ಯಾಡಿಸನ್ ಸುದೀರ್ಘವಾದ ಸಂಶೋಧನೆ ನಡೆಸಿದ ವರದಿಯಲ್ಲಿ 1 ನೇ ಶತಮಾನದಿಂದ 17 ನೇ ಶತಮಾನದವರೆಗೂ ನಿರಂತರವಾಗಿ ಪ್ರಗತಿ ಕಂಡ ರಾಷ್ಟ್ರಗಳ ಸಾಲಿನಲ್ಲಿ ಭಾರತ ಅಗ್ರ ಸ್ಥಾನ ಪಡೆದಿತ್ತು ಎಂದರು. 1600 ವರ್ಷಗಳ ಕಾಲ ಆರ್ಥಿಕ ಸಂಪತ್ತಿನಿಂದಾಗಿ ನಿರಂತರವಾಗಿ ಬೆಳೆದಿದ್ದ ರಾಷ್ಟ್ರ 300 ವರ್ಷಗಳಲ್ಲಿ ಎಲ್ಲವನ್ನು ಕಳೆದುಕೊಂಡಿತು. ಪರಕೀಯರ ದಾಳಿ ಎಂದು ಸರಳವಾಗಿ ವಿಶ್ಲೇಷಿಸಲಾಗುತ್ತದೆ. ಆದರೆ ಪರಕೀಯರ ದಾಳಿಯಿಂದ ನಾವು ಕೇವಲ ಸಂಪತ್ತನ್ನು ಮಾತ್ರ ಕಳೆದುಕೊಂಡಿದ್ದೇವೆಯೇ? ಆದರ್ಶಗಳನ್ನು ಕಳೆದುಕೊಂಡಿದ್ದೇವೆ ಎಂಬುದನ್ನು ಪರಾಮರ್ಶಿಸಿ ಕೊಳ್ಳಬೇಕು ಎಂದು ಡಾ. ಬಾಲಸುಬ್ರಮಣ್ಯಂ ಹೇಳಿದರು.

ಸಾಧಕರಿಗೆ ಸನ್ಮಾನ

ಡ್ರೋಣ್ ಸಂಶೋಧಕ ಯುವ ವಿಜ್ಞಾನಿ ಎಂ.ಎನ್. ಪ್ರತಾಪ್ ಅವರನ್ನು ಯುವ ಸಂಗಮದಲ್ಲಿ ಸನ್ಮಾನಿಸಲಾಯಿತು. ಬಳಿಕ ಮಾತನಾಡಿದ ಪ್ರತಾಪ್ ಸಾಧನೆಗೆ ಬಡತನ ಅಡ್ಡಿಯಲ್ಲ. ಯುವಕರು ಕಷ್ಟಗಳನ್ನು ಸವಾಲಾಗಿ ಸ್ವೀಕರಿಸಬೇಕೆಂದು ತಮ್ಮ ಯಶೋಗಾಥೆ ವಿವರಿಸಿದರು. ವಿಜಯವಾಣಿ ಅಂಕಣಕಾರ ಡಾ. ಬಾಬು ಕೃಷ್ಣಮೂರ್ತಿ ಅವರನ್ನು ಸಹ ಸನ್ಮಾನಿಸಿ ಗೌರವಿಸಲಾಯಿತು.

ಯುವ ಶಕ್ತಿ ರಾಷ್ಟ್ರದ ಶಕ್ತಿ

ಮಾಜಿ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಯುವಜನತೆ ಪಾತ್ರ ಪ್ರಮುಖವಾಗಿದೆ. ಸ್ವಾತಂತ್ರ್ಯ ಚಳವಳಿಯಿಂದ ಹಿಡಿದು ತುರ್ತು ಪರಿಸ್ಥಿತಿ ವಿರೋಧಿ ಹೋರಾಟ, ರಾಮ ಮಂದಿರ ನಿರ್ಮಾಣದ ಸಂಕಲ್ಪ, ಗೋವಧೆ ನಿಷೇಧ ಹೋರಾಟ, ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ರಾಷ್ಟ್ರ ಧ್ವಜ ಹಾರಾಟಕ್ಕೆ ಸಂಬಂಧಿಸಿದ ಹೋರಾಟಗಳಲ್ಲಿ ಯುವಕರು ಮುಂಚೂಣಿಯ ಪಾತ್ರ ವಹಿಸಿದ್ದಾರೆ. ಯುವಶಕ್ತಿ ರಾಷ್ಟ್ರದ ಶಕ್ತಿ ಎಂದರು. ಜಗತ್ತಿನ ಜ್ಞಾನದ ದೇಶ ಭಾರತ. ಜ್ಞಾನದ ಹಂತಗಳನ್ನು ದಾಟಿ ಸೃಷ್ಟಿಯ ಸತ್ಯ ಅರಿಯಬೇಕು. ಶ್ರಮ ಸಂಸ್ಕೃತಿ ನಮ್ಮದಾಗಬೇಕು. ಶಿಸ್ತು, ಸಂಯಮ ರೂಢಿಸಿಕೊಳ್ಳಬೇಕು. ಯುವಕರು ಸಾಮಾಜಿಕ ಕಳಕಳಿ, ಬದ್ಧತೆ ಬೆಳೆಸಿಕೊಳ್ಳಬೇಕು. ಸಮಾಜದ ಋಣ ತೀರಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ಗೋ ರಕ್ಷಣೆ, ನೀರು ಸಂರಕ್ಷಣೆ, ಪರಿಸರದ ಉಳಿವಿಗೆ ಶ್ರಮಿಸಬೇಕು. ಜಾತಿ, ಮತ ಪಂಥ ತೊರೆದು ದೇಶದ ಪ್ರಗತಿಗೆ ಶ್ರಮಿಸಬೇಕೆಂದರು. ಯುವಕರಿಗೆ ಶಿಕ್ಷಣ, ಸಂಸ್ಕಾರ ನೀಡಬೇಕು. ಶಿಕ್ಷಣ ಎಂದರೆ ಹಣ ಗಳಿಸುವ ಸಾಧನವಲ್ಲ. ವ್ಯಕ್ತಿತ್ವ ಮತ್ತು ವ್ಯವಸ್ಥೆ ಬದಲಿಸುವ ಮಾರ್ಗ. ಇಂದಿನ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆ ಆಗಬೇಕಿದೆ ಎಂದರು.

ಆಕ್ರಮಣ ಮೆಟ್ಟಿ ನಿಂತ ಸಂಸ್ಕೃತಿ

ಆನೆಗೊಂದಿಯ ಮಹಾರಾಜ ಕೃಷ್ಣದೇವರಾಯ ಮಾತನಾಡಿ, ಭಾರತೀಯ ಸಂಸ್ಕೃತಿ ಜಗತ್ತಿನ ವಿಶಿಷ್ಟ ಸಂಸ್ಕೃತಿ. ಸಹಸ್ರಾರು ವರ್ಷಗಳ ಆಕ್ರಮಣ ಮೆಟ್ಟಿ ಇಂದಿಗೂ ಜೀವಂತ ಉಳಿದಿದೆ. ವಿಜಯನಗರ ಸಾಮ್ರಾಜ್ಯ ಹಿಂದು ಸಂಸ್ಕೃತಿ ರಕ್ಷಿಸಿದ್ದಲ್ಲದೆ ಅದರ ಬೆಳವಣಿಗೆಗೆ ಶ್ರಮಿಸಿತು. ಜಗತ್ತಿನ ಹಲವು ರಾಷ್ಟ್ರಗಳಿಗೆ ಇಲ್ಲಿನ ಸಂಸ್ಕೃತಿ ಹರಡುವಂತೆ ಮಾಡಿತು. ಆದರೆ ಇಂದಿನ ಯುವ ಜನತೆ ಶ್ರೇಷ್ಠ ಸಂಸ್ಕೃತಿಯನ್ನು ಮರೆಯುತ್ತಿರುವುದು ದುರದೃಷ್ಟಕರ. ಪ್ರಜ್ಞಾವಂತರು ನಮ್ಮ ಸಂಸ್ಕೃತಿಯ ಬಗ್ಗೆ ಯುವಕರಲ್ಲಿ ಅರಿವು ಮೂಡಿಸಬೇಕಾದ ಮಹೋನ್ನತ ಜವಾಬ್ದಾರಿ ಹೊತ್ತುಕೊಳ್ಳಬೇಕಿದೆ ಎಂದರು.

ಶಾಸ್ತ್ರೀಜಿ ಸ್ಫೂರ್ತಿದಾಯಕ ಭಾಷಣ

ಕಷ್ಟ ಸಹಿಷ್ಣು ಗುಣ, ದೇಶಕ್ಕಾಗಿ ತ್ಯಾಗ, ಶ್ರಮ ಯುವಕರ ಮೂಲ ಮಂತ್ರವಾಗಬೇಕು. ಈ ಗುಣಗಳೇ ಯುವಕರಿಗೆ ದಾರಿದೀಪವಾಗಬೇಕೆಂದು ಲಾಲ್ ಬಹಾದ್ದೂರ ಶಾಸ್ತ್ರೀ ಅವರ ಪುತ್ರ ಸುನೀಲ ಶಾಸ್ತ್ರೀಜಿ ಅಭಿಪ್ರಾಯಪಟ್ಟರು. 'ಯುವ ಸಂಗಮ'ಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿ ಮಾತನಾಡಿದ ಅವರು, ಶಾಸ್ತ್ರೀಜಿ ಅವರ ಆದರ್ಶಗಳ ಬೆಳಕಿನಲ್ಲಿ ಯುವಜನತೆ ಸಾಗಬೇಕಾದ ಪಥದ ಬಗ್ಗೆ ಅರ್ಥಪೂರ್ಣವಾಗಿ ವಿವರಿಸಿದರು. ಬಡತನದಂಥ ಕಷ್ಟಗಳು ಯುವಕರ ಸಾಧನೆಯ ಅಡ್ಡಗಾಲಲ್ಲ, ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸಬೇಕಾದರು. ಮನೆಯಲ್ಲಿ ದೀಪವಿಲ್ಲದ ಪರಿಸ್ಥಿತಿಯಲ್ಲಿ, ಬನಾರಸ್‌ನ ರಾಮನಗರದ ಬೀದಿದೀಪದ ಬೆಳಕಿನಲ್ಲಿ ಓದಿ ಜ್ಞಾನದ ಬೆಳಕನ್ನು ಕಂಡವರು ಶಾಸ್ತ್ರೀಜಿ. ಇಂತಹ ಶಾಸ್ತ್ರೀಜಿ ಅವರ ಕಷ್ಟ ಸಹಿಷ್ಣು ಗುಣ ಯುವಕರಿಗೆ ದಿಕ್ಸೂಚಿಯಾಗಿದೆ ಎಂದರು. ವಿಶಿಷ್ಟಪೂರ್ಣ ಡ್ರೋಣ್ ನಿರ್ಮಿಸಿ ಅಂತಾರಾಷ್ಟ್ರೀಯ ಯುವ ವಿಜ್ಞಾನಿ ಪ್ರಶಸ್ತಿಗೆ ಭಾಜನರಾಗಿರುವ ಕರ್ನಾಟಕದ ಪ್ರತಾಪ್ ಅವರ ಸಾಧನೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದ ಸುನೀಲ್ ಶಾಸ್ತ್ರೀಜಿ, ದೇಶದಲ್ಲಿ ಒಬ್ಬ ಪ್ರತಾಪ್ ಅಲ್ಲ, ಸಹಸ್ರಾರು ಪ್ರತಾಪ್‌ಗಳು ಜನ್ಮತಾಳಬೇಕಿದೆ, ಸಾಧನೆಯ ಶಿಖರವನ್ನು ಮುಟ್ಟಬೇಕಿದೆ, ನೂರಾರು ಚಿನ್ನದ ಪದಕಗಳನ್ನು ಭಾರತದ ಮುಡಿಗೇರಿಸಬೇಕಿದೆ ಎಂದು ಆಶಿಸಿದರು. ಬಾಲಗಾಂವದ ಅಮೃತಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿದ್ದರು. ಭಾರತೀಯ ಸಂಸ್ಕೃತಿ ಉತ್ಸವ ರಾಷ್ಟ್ರೀಯ ಸಂಚಾಲಕ ಬಸವರಾಜ ಪಾಟೀಲ ಸೇಡಂ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಘವ ಅಣ್ಣಿಗೇರಿ ಸ್ವಾಗತಿಸಿದರು.

ಭಾರತೀಯ ಸಂಸ್ಕೃತಿ ಉತ್ಸವದ ಯುವ ಸಂಗಮವು ಯುವಕರಲ್ಲಿ ಮಾನಸಿಕ, ದೈಹಿಕ, ಆಧ್ಯಾತ್ಮಿಕ, ನೈತಿಕ, ಸಾಮಾಜಿಕ ಶಕ್ತಿ ಬೆಳೆಸುತ್ತದೆ. ಯುವ ಸಂಗಮವು ಅಭೂತಪೂರ್ವ ಹಾಗೂ ಪ್ರೇರಣಾದಾಯಕವಾಗಿ ನಮ್ಮ ರಾಷ್ಟ್ರ ಚೇತನವನ್ನು ಜಾಗೃತಗೊಳಿಸಿ ಯುವಕರಲ್ಲಿ ನವೋತ್ಸಾಹ ತುಂಬುತ್ತದೆ. ನಮ್ಮ ಸಂಸ್ಕೃತಿ ಬಗ್ಗೆ ಹೆಮ್ಮೆ ಮೂಡಿಸಿ ನವ ಭಾರತ ನಿರ್ಮಾಣಕ್ಕೆ ಬುನಾದಿ ಹಾಕಿದೆ.
| ದಿನೇಶ ಪಾಟೀಲ ಉಪನ್ಯಾಸಕ

ಕಾರ್ಯಕ್ರಮ ತುಂಬ ಚೆನ್ನಾಗಿ ಮಾಡಿದ್ದಾರೆ. ಇಲ್ಲಿ ರೈತರು ತಿಳಿದುಕೊಳ್ಳುವ ವಿಷಯ ಜಾಸ್ತಿಯಿದೆ. ಸಾಕಷ್ಟು ಮಾಹಿತಿ ಇದ್ದು, ರೈತರು ಸದ್ಬಳಕೆ ಮಾಡಿಕೊಳ್ಳಬೇಕು. ಇಸ್ರೇಲ್ ಮಾದರಿ ಕೃಷಿ ಪದ್ಧತಿ, ವಿವಿಧ ಬೆಳೆಗಳನ್ನು ಬೆಳೆದಿರುವುದು ನೋಡಿ ಮನಸ್ಸಿಗೆ ತೃಪ್ತಿಯಾಯಿತು.
| ಹೊನ್ನಪ್ಪ ಎಸ್. ಗೌಡಪ್ಪನವರ
ರೈತ ಬಾಗಲಕೋಟೆ

ಉತ್ಸವದಲ್ಲಿ ಇಂದು

ಕಗ್ಗೋಡದಲ್ಲಿ ನಡೆಯುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಡಿ.29ರಂದು ಬೆಳಗ್ಗೆ 10.30ಕ್ಕೆ ಕಾಯಕ ಮತ್ತು ಆರೋಗ್ಯ ಶಕ್ತಿ ಸಂಗಮದಲ್ಲಿ ಕಾಗಿನೆಲೆಯ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ. ಕೇಂದ್ರ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟಿಸಲಿದ್ದಾರೆ. ಆರೋಗ್ಯ ಸಚಿವ ಶಿವಾನಂದ ಪಾಟೀಲ ಅಧ್ಯಕ್ಷತೆ ವಹಿಸಲಿದ್ದಾರೆ. ಸಿಂಧೂತಾಯಿ ಸಪ್ಕಾಳ್, ಡಾ.ಸಿ.ಆರ್. ಚಂದ್ರಶೇಖರ, ಡಾ.ನಾಗೇಂದ್ರ, ಡಾ.ಕೃಷ್ಣ ಕುಮಾರನ್, ಬಿ.ಎಂ.ಕುಮಾರಸ್ವಾಮಿ, ಸಂಜಯ ಕಾಂಬ್ಳೆ, ಡಾ.ಜಿ.ಸ್ವಾಮಿನಾಥ ಇತರರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 3.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ [illegible] ಪಂಡಿತಾರಾಧ್ಯವರ್ಯ ಸ್ವಾಮೀಜಿ, ಮಧ್ಯಪ್ರದೇಶದ ಶ್ರೀ ಸುಮನ್ ಭಾಯಿ ಗುರೂಜಿ, ಹೊನ್ನದ ಶ್ರೀ ಶಿವಾನಂದ ಸ್ವಾಮೀಜಿ, ಚಿತ್ರದುರ್ಗದ ಮಾದಾರ ಚೆನ್ನಯ್ಯ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ. ಮಧ್ಯಪ್ರದೇಶದ ಮಹೇಶ ಶರ್ಮಾ ಅಧ್ಯಕ್ಷತೆ ವಹಿಸಲಿದ್ದಾರೆ. ಕಾಯಕಲ್ಪ ತಜ್ಞ ಡಾ. ನೇಹಾ ಮಾಧವನ್, ಡಾ. ಮಹೇಶ ಜೋಶಿ, ಡಾ. ಆನಂದ ಜೋಶಿ, ರಿತಿಪಾಲ ಚವ್ಹಾಣ್, ನಿರೇಶ ಮಂಡ್ಲೆವಾಲಾ, ರಾಧಾಕೃಷ್ಣ ಶೆಟ್ಟಿ ಇನ್ನಿತರರು ಭಾಗವಹಿಸಲಿದ್ದಾರೆ. ಸಂಜೆ 5.30ಕ್ಕೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಫೋಣಗೇರಿಯ ಶ್ರೀಮಲ್ಲಯ್ಯ ಸ್ವಾಮೀಜಿ ಸಾನ್ನಿಧ್ಯವಹಿಸಲಿದ್ದಾರೆ. ಸಚಿವ ಎಂ.ಬಿ.ಪಾಟೀಲ ಉದ್ಘಾಟಿಸಲಿದ್ದಾರೆ. ಶಾಸಕ ಮಹೇಶ ಕುಮಟಳ್ಳಿ ಪಾಲ್ಗೊಳ್ಳಲಿದ್ದಾರೆ. ನಂತರ ಕೊಲ್ಹಾಪುರದ ತಂಡದಿಂದ ಶಿವಾಜಿ ಮಹಾರಾಜರ ಜೀವನ ಕುರಿತ ಶಿವಘರ್ಜನೆ ನಾಟಕ ಪ್ರದರ್ಶನಗೊಳ್ಳಲಿದೆ.

ಸಾಧಕರ ಸಮಾಗಮ

ರಾಯಚೂರು ಜಿಲ್ಲೆ ದೇವದುರ್ಗ ತಾಲೂಕಿನ ಕೃಷ್ಣಾಪುರದಿಂದ ಬಂದ ರಮೇಶ್ ಬಲೂನ್ ಅಂಗಳದಲ್ಲಿ ಅಕ್ಷರದ ದೀಪವನ್ನು ಹಚ್ಚಿದೆ, ಎಷ್ಟೋ ದೀಪಯುಕ್ತ ಜೀವನ ಮಾಡುತ್ತಿದ್ದರು. ಅಕ್ಷರ ಮತ್ತು ಜ್ಞಾನದ ಹಸಿವು ಸಾಧನೆಗೆ ಪ್ರೇರೇಪಿಸಿತು. ತೀವ್ರತರ [illegible] ಮುಖ್ಯ [illegible] ದಾಟಿ ವ್ಯಕ್ತಿತ್ವ ವಿಕಸನಕಾರರಾದ ರಮೇಶ್ ಅವರಿಗೆ 4 ಲಕ್ಷಕ್ಕಿಂತಲೂ ಅಧಿಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಪ್ರೇರಣಾತ್ಮಕ ಮಾತುಗಳಿಂದ ಸಾವಿರಾರು ಜನರ ಮೇಲೆ ಪ್ರಭಾವ ಬೀರಿದ್ದಾರೆ. ಯುವ ಸಂಗಮದಲ್ಲಿ ಇವರು ರಾಜ್ಯ ಪ್ರಶಸ್ತಿ ಸ್ವೀಕರಿಸಿದಾಗ ಸಾವಿರಾರು ಜನ ಸಭಿಕರಿಂದ ಚಪ್ಪಾಳೆ ಗಿಟ್ಟಿಸಿದ್ದರು. [illegible] ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ರಮೇಶ್, ತುಂಬ ಜನರು ದೇಶ ಬದಲಾಗಬೇಕು, ದೇಶವನ್ನು ಬದಲಾಯಿಸಬೇಕು ಎನ್ನುತ್ತಾರೆ. ಆದರೆ ನಾವು ಬದಲಾದರೆ ಈ ಸಮಾಜ, ರಾಷ್ಟ್ರವೂ ಬದಲಾಗುತ್ತದೆ. ಪಾಲಕರು ಮಕ್ಕಳಿಗೆ [illegible] ಶಿಕ್ಷಣ ನೀಡಿದರೆ, ಅದೇ ಅವರ ಬದುಕಿನ ಮುಂದಿನ ಸಮಸ್ಯೆಯ ಅಸ್ತ್ರ ಆಗುತ್ತದೆ. 16 ವರ್ಷ ಎಷ್ಟು ದೀಪಯುಕ್ತದಿ ನಾನು ಈ ಸ್ಥಿತಿಗೆ ಬರಲು ಶಿಕ್ಷಣವೇ ಕಾರಣ ಎಂದರು.

ಯುವ ಶಕ್ತಿ ಸಂಗಮ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಸ್ತೋಮ.

ಮಾಣಿಕ್ಯ
ಕೆರಿಯರ್ ಅಕಾಡೆಮಿ, ವಿಜಯಪುರ
ಉಚಿತ ಕಾರ್ಯಾಗಾರ
KAS / PSI / PC ಉಚಿತ ವಿಶೇಷ ಉಪನ್ಯಾಸ
01.01.2019, Time 10 am
KAS / PSI / PC NIGHT CLASS
9980599159 | 9731460077

ನೀವು ಉದ್ಧಾರ ಆಗ್ತೀರಿ!

ತುಂಬ ಜನ ಯುವಕರು ಹೀಗಾಗಿದ್ದಾರೆ, ಹಾಗಾಗಿದ್ದಾರೆ ಎಂದು ಹೇಳ್ತಾರೆ, ಆದರೆ ನೀವು ಖಂಡಿತವಾಗಿಯೂ ಉದ್ಧಾರವಾಗ್ತೀರಿ, ನಿಮ್ಮ ಶಕ್ತಿ ಬಗ್ಗೆ ನನಗೆ ನಂಬಿಕೆಯಿದೆ. ನೀವು ಅಸಾಧಾರಣವಾದ ಸಾಧನೆ ಮಾಡಬಲ್ಲಿರಿ, ಏಕೆಂದರೆ ಭವಿಷ್ಯದ ನಿರ್ಮಾಪಕರು ನೀವೇ-ಹೀಗೆ ಯುವಕರಲ್ಲಿ ಸ್ಫೂರ್ತಿ ತುಂಬಿದ ವ್ಯಕ್ತಿತ್ವ ವಿಕಸನ ತರಬೇತುದಾರ ಕೆ.ಎಸ್. ಆನಂದ್ ಯುವ ಸಂಗಮದಲ್ಲಿ ರಾಜ್ಯ ಪ್ರಶಸ್ತಿ ಸ್ವೀಕರಿಸಿದರು. ಸಮಾಜಕ್ಕಾಗಿ ಏನಾದರೂ ಮಾಡಬೇಕು ಎಂಬ ಹಂಬಲಕ್ಕೆ ನೀರೆರೆಯಲ್ಲಿ ಕಲ್ಪಿಸಿದ ವೇದಿಕೆಯೇ ಪ್ರೇರಣೆ ನೀಡಿತು ಎಂದರು.

115 ಅಂಗವಿಕಲರ ತಾಯಿ

ಬೆಳಕು ಅಕಾಡೆಮಿ ಸಂಸ್ಥಾಪಕಿ ಮತ್ತು ಹಲವು ಅಂತಾರಾಷ್ಟ್ರೀಯ ಪ್ರಶಸ್ತಿಗಳಿಗೆ ಭಾಜನರಾಗಿರುವ ಅಶ್ವಿನಿ ಅಂಗಡಿ, ಅಂಗವಿಕಲರನ್ನು ಸಮಾಜದ ಮುಖ್ಯವಾಹಿನಿಗೆ ತರೆ ತರುವಾಗ ಎದುರಾದ ಅಡೆತಡೆಗಳು, ಅದನ್ನು ಮೀರಿ ಅವರಿಗೆ ಸಮಾಜದಲ್ಲೊಂದು ಸ್ಥಾನ ಕಲ್ಪಿಸಿದ ಯಶೋಗಾಥೆಯನ್ನು ವಿವರಿಸಿದಾಗ ಹಲವರ ಕಣ್ಣಾಲಿಗಳು ತೇವವಾಗಿದ್ದವು. ಯುವ ಸಂಗಮದಲ್ಲಿ ರಾಜ್ಯ ಪ್ರಶಸ್ತಿ ಸ್ವೀಕರಿಸಿದ ಅಶ್ವಿನಿ ಅಂಗಡಿ, 115 ಅಂಗವಿಕಲ ಹೆಣ್ಣುಮಕ್ಕಳಿಗೆ ಹೊಸ ಬಾಳು ಕಲ್ಪಿಸಿದ ಸಾರ್ಥಕತೆ ಇದ್ದು, ಅವರ ತಾಯಿಯ ಸ್ಥಾನದಲ್ಲಿ ನಿಂತು ಕೆಲಸ ಮಾಡುತ್ತಿರುವ ಸಂತೃಪ್ತಿ ಇದೆ ಎಂದರು.

ಕಗ್ಗೋಡಕ್ಕೆ ಹರಿದು ಬಂದ ಜನಸಾಗರ!

ವಿಜಯಪುರ ತಾಲೂಕಿನ ಕಗ್ಗೋಡದಲ್ಲಿ ನಡೆಯುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವದ 5ನೇ ದಿನ ಶುಕ್ರವಾರ ಯುವಶಕ್ತಿ ಸಂಗಮಕ್ಕೆ ಜನಸಾಗರವೇ ಹರಿದು ಬಂದಿತು. ಐತಿಹಾಸಿಕ ನಗರ ವಿಜಯಪುರ ಜಿಲ್ಲೆ ಸೇರಿ ವಿವಿಧ ಭಾಗಗಳಿಂದ ಹೆಚ್ಚಾಗಿ ಯುವಕರೇ ಆಗಮಿಸಿದ್ದರು. ವಿವಿಧ ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು ತಂಡೋಪ ತಂಡವಾಗಿ ಆಗಮಿಸಿದ್ದರು. ಕಗ್ಗೋಡದ ಮುಖ್ಯದ್ವಾರದಿಂದ ಉತ್ಸವದ ಮುಖ್ಯ ವೇದಿಕೆವರೆಗೂ ಜನಸಾಗರ ಕಂಡು ಬಂದಿತು. ಪಂಚಗವ್ಯ ಮೇಳ, ವಿಜ್ಞಾನ ವಸ್ತು ಪ್ರದರ್ಶನ, ಪುಸ್ತಕ ಮೇಳಗಳು ಸೇರಿ ವಿವಿಧ ಮಳಿಗೆಗಳು ವಿದ್ಯಾರ್ಥಿಗಳು, ಯುವಕರಿಂದ ತುಂಬಿ ತುಳುಕಿದವು.

ಭಾರತೀಯ ಸಂಸ್ಕೃತಿ, ಸಂಪ್ರದಾಯ, ಆಚಾರ-ವಿಚಾರ ಬೆಳೆಸುವ ನಿಟ್ಟಿನಲ್ಲಿ ಇಂಥ ಉತ್ಸವಗಳು ಆಗಾಗ್ಗೆ ನಡೆಯಬೇಕು. ಪ್ರತಿ ಜಿಲ್ಲೆ, ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸಣ್ಣ ಸಣ್ಣ ಪ್ರಮಾಣದಲ್ಲಿ ನಿರಂತರವಾಗಿ ಉತ್ಸವಗಳಾಗಬೇಕು. ಉತ್ಸವ ನಮ್ಮದು ಎಂಬ ಭಾವದೊಂದಿಗೆ ಸರ್ವರೂ ಪಾಲ್ಗೊಳ್ಳಬೇಕು. ಗುಡಿ ಕೈಗಾರಿಕೆ, ಕೃಷಿ, ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಯೋಗ-ಧ್ಯಾನ ಮುಂತಾದ ಪದ್ಧತಿ ಪ್ರಚುರ ಪಡಿಸುವ ನಿಟ್ಟಿನಲ್ಲಿ ಭಾರತೀಯ ಸಂಸ್ಕೃತಿ ಉತ್ಸವ ಸಫಲವಾಗಿದೆ. ಕಗ್ಗೋಡದಲ್ಲಿ ಪ್ರಾಚೀನ ಭಾರತದ ವೈಭವ ಮರುಕಳಿಸಿದೆ.
| ಹರ್ಷವರ್ಧನ ಶೀಲವಂತ
ಪತ್ರಿಕೋದ್ಯಮ ಸಹ ಪ್ರಾಧ್ಯಾಪಕ

BEFORE THE KARNATAKA APPELLATE TRIBUNAL AT BANGALORE
MISC. PETITION No. 26/2016 (CH-5)
IN APPEAL No. 344 OF 2010
BETWEEN:
Sri. Ratnakar Shetty
Since Deceased by his legal representatives
...Petitioners
AND:
The Asst. Registrar of Co-operative Societies, Belgaum and Others.
...Respondents
Notice to Respondent No. 5 and 8
5. SRI. V.H. ILAGERE Age: Major, Director Bagalkote District Central Credit Co-operative Society, Bagalkot, Ananda Nagar, Badami-587 201, Bagalkot-District.
8. SRI. A.B. HOSAGANI Age: Major, Occ: Agriculturist, Badami, Bagalkote Dist-587 201.
The Notice that above named Appellants have filed Misc Petition No.26/2016 seeking recalling the order dated 19.07.2016 dismissing the appeal for non prosecution and restore the appeal No. 344/10 filed against the Joint Registrar of Co-Op Societies and others. The above Case is posted on 03.01.2019.
You are hereby directed to appear before this Hon'ble Karnataka Appellate Tribunal at Bangalore, M.S Building, Ambedkar Veedhi, Bangalore-01 (Court Hall No. 5) Co-Op Societies, 2nd Floor on 03-01-2019 at 2.30 p.m. either in person or through an Advocate to answer the said Misc Petition No. 26/2016, failing which same will be disposed off in your absence.
Given under my hand and seal of the Court on the 17th day of December 2018 at Bangalore.
By Order of the KAT
Sd/- The Registrar
Karnataka Appellate Tribunal
At Bangalore
Advocate for Appellant
Prakash M. Patil, Advocate
No. 101, 6th Cross, Railway Parallel Road, Kumar Park West, Bangalore-560 020.

ಸಂಸ್ಕೃತಿಯ ವಿರಾಟ್ ಸ್ವರೂಪ ಸೃಷ್ಟಿ

ಕಗ್ಗೋಡದಲ್ಲಿ ಆಯೋಜಿಸಿರುವ ಭಾರತೀಯ ಸಂಸ್ಕೃತಿ ಉತ್ಸವದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬಬಲೇಶ್ವರದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು.

- ಮಹಾದೇವ ಶಿವಾಚಾರ್ಯ ಸ್ವಾಮೀಜಿ ಹೇಳಿಕೆ
- ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟನೆ

ವಿಜಯಪುರ: ಭಾರತೀಯ ಸಂಸ್ಕೃತಿ ಉತ್ಸವದಿಂದಾಗಿ ಕಗ್ಗೋಡದಲ್ಲಿ ಭಾರತೀಯ ಸಂಸ್ಕೃತಿಯ ವಿರಾಟ್ ಸ್ವರೂಪ ಕಾಣುತ್ತಿದೆ ಎಂದು ಬಬಲೇಶ್ವರ ಗುರುಪಾದೇಶ್ವರ ಬೃಹನ್ಮಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ ಬಣ್ಣಿಸಿದರು.

ಕಗ್ಗೋಡದಲ್ಲಿ ಆಯೋಜಿಸಿರುವ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಶುಕ್ರವಾರ ಯುವಶಕ್ತಿ ಸಂಗಮದ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂತಹ ವೈಭವ, ವೈವಿಧ್ಯಮಯ ಕಾರ್ಯಕ್ರಮ ವೀಕ್ಷಣೆಗೆ ಜನಸಾಗರವೇ ಹರಿದು ಬರುತ್ತಿದೆ. ಇದುವರೆ ಒಟ್ಟಾರೆ [illegible] ಈ ಉತ್ಸವ ನೋಡಿ ಜನತೆ ಮೂಕವಿಸ್ಮಿತರಾಗಿದ್ದಾರೆ. ಅಲ್ಲದೆ, ಡಿ.24 ರಂದು ವಿಜಯಪುರದಲ್ಲಿ ಗ್ರಾಮೀಣ ಸೊಗಡಿನ ಜಾನಪದಗಳ ಶೋಭಾಯಾತ್ರೆ ಅದ್ಧೂರಿಯಾಗಿ ನಡೆಯಿತು ಎಂದು ವರ್ಣಿಸಿದ ಅವರು, ಬಬಲೇಶ್ವರ ಭಾಗದ ನಮ್ಮ ಭಕ್ತರು 20 ಕ್ವಿಂಟಾಲ್ ಮಾದಲಿ ನೀಡುತ್ತಿರುವುದು ಹೆಮ್ಮೆ ಎನಿಸುತ್ತದೆ ಎಂದು ಹೇಳಿದರು.

ದೇಶದ ಮೇಲೆ ಪ್ರಬಲರು ಸೇರಿ ಹಲವರು ದಾಳಿ ಮಾಡಿದರೂ ನಮ್ಮ ಸಂಸ್ಕೃತಿ ಅಳಿದಿಲ್ಲ. ಅಳಿಯುವುದೂ ಇಲ್ಲ ಎಂಬುದಕ್ಕೆ ಇಲ್ಲಿ ನಡೆದಿರುವ ಕಾರ್ಯಕ್ರಮವೇ ಸಾಕ್ಷಿ ಎಂದು ಹೇಳಿದರು.

ವಂದೇ ಮಾತರಂ ಫೌಂಡೇಷನ್‌ದ ಮಾಧವಶೆಟ್ಟಿ ಮಾತನಾಡಿದರು. [illegible] ಕ್ಯಾಪ್ಟನ್ ಕೈರಾನ್ ಗಿರಿಯಪ್ಪನವರ್, ಪ್ರಾಚಾರ್ಯ ಡಾ.ವಿ.ಎಸ್.ಕಟಗಿಹಳ್ಳಿಮಠ ವೇದಿಕೆ ಮೇಲಿದ್ದರು.

ಅನುಗ್ರಹ ಆಸ್ಪತ್ರೆಯ ಮಾದರಿ ಕಾರ್ಯ | ಜನರಿಗೆ ನೇತ್ರದಾನದ ಅರಿವು

ಅಂಧರ ಬಾಳಿಗೆ ಬೆಳಕಾದ ಮಳಿಗೆ

ವಿಜಯಪುರ: ಹುಟ್ಟಿದ ಮನುಷ್ಯ ಸಾಯಲೇಬೇಕು. ಆದರೆ, ಸತ್ತ ನಂತರ ಮನುಷ್ಯ ದೇಹವನ್ನು ದಹನ ಮಾಡಲಾಗುತ್ತದೆ ಇಲ್ಲವೆ ಹೂಳಲಾಗುತ್ತದೆ. ಆದರೆ, ನಿರ್ದಿಷ್ಟ ಅವಧಿಯಲ್ಲಿ ಮೃತ ದೇಹದಿಂದ ತೆಗೆಯಲಾಗುವ ಕಣ್ಣುಗಳು ಮತ್ತೊಬ್ಬರ ಬಾಳಿಗೆ ಬೆಳಕಾಗುತ್ತದೆ ಎಂಬುದೂ ಸತ್ಯ.

ಈ ನಿಟ್ಟಿನಲ್ಲಿ ತಾಲೂಕಿನ ಕಗ್ಗೋಡದ ಗೋ ರಕ್ಷಾ ಕೇಂದ್ರದ ಆವರಣದಲ್ಲಿ ನಡೆಯುತ್ತಿರುವ ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ವಿಜಯಪುರದ ಅನುಗ್ರಹ ಆಸ್ಪತ್ರೆಯ ನೇತ್ರ ಭಂಡಾರದ ಮಳಿಗೆ ಅಕ್ಷರಶಃ ಮಿಡಿಯುತ್ತಿರುವುದು ಜನರನ್ನು ವಿಶೇಷವಾಗಿ ಆಕರ್ಷಿಸುತ್ತಿದೆ.

ನೇತ್ರದಾನ ಮಾಡಿ ಇಬ್ಬರು ಅಂಧರ ಬಾಳಿಗೆ ಬೆಳಕಾಗಿ ಎಂಬ ಸ್ಲೋಗನ್‌ನೊಂದಿಗೆ ತೆರೆಯಲಾಗಿರುವ ಮಳಿಗೆಯಲ್ಲಿ ಇಬ್ಬರು ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದು, ಉತ್ಸವಕ್ಕೆ ಆಗಮಿಸುವ ಜನರಿಗೆ ನೇತ್ರದಾನದ ಮಹತ್ವ ವಿವರಿಸುತ್ತಿದ್ದಾರೆ. ನೇತ್ರದಾನಕ್ಕಾಗಿ ಮಳಿಗೆಯಲ್ಲೇ ನೋಂದಣಿ ಮಾಡಲಾಗುತ್ತಿದ್ದು, ಈ ಕುರಿತು ಕರಪತ್ರಗಳನ್ನೂ ವಿತರಿಸಲಾಗುತ್ತಿದೆ. ಈಗಾಗಲೇ [illegible] ಹೆಚ್ಚು ಜನರು ನೋಂದಾಯಿಸಿದ್ದಾರೆ. ಅಂಧತ್ವ ನಿವಾರಣೆ ನಿಟ್ಟಿನಲ್ಲಿ ಸ್ವ ಇಚ್ಛೆಯಿಂದ ನನ್ನ ಮರಣಾನಂತರ ನನ್ನ ಕಣ್ಣುಗಳನ್ನು ನೇತ್ರ ಭಂಡಾರಕ್ಕೆ ದಾನ ಮಾಡಲು ನಿರ್ಧರಿಸಿದ್ದೇನೆ ಎಂದು ಸಾರ್ವಜನಿಕರು ಸಹಿ ಮಾಡಿ ಪತ್ರದಲ್ಲಿ ತಮ್ಮ ಹೆಸರು ಹಾಗೂ ಇನ್ನಿತರ ವಿವರ ನಮೂದಿಸಿದ್ದಾರೆ. ತಮ್ಮ ಸಾವಿನ ನಂತರ ಕಣ್ಣುಗಳನ್ನು ದಾನ ಮಾಡುವ ಸಂಬಂಧ ಸಮ್ಮತಿ ನೀಡಿದ್ದು ಮಾದರಿ ಕಾರ್ಯವಾಗಿದೆ. ಕಣ್ಣು ದೇಹದ ಅಮೂಲ್ಯ ಅಂಗ. ನಿಧನಾನಂತರ ಕಣ್ಣುಗಳನ್ನು ದೇಹದೊಂದಿಗೆ ಮಣ್ಣು ಮಾಡದೆ ದಾನವಾಗಿ ನೀಡಿದರೆ ಇಬ್ಬರ ಬಾಳಲ್ಲಿ ಅಂಧಕಾರ ತೊಲಗಿ ದೃಷ್ಟಿ ಒದಗಿ ನಮ್ಮ ಕಣ್ಣುಗಳ ಮೂಲಕ ಅವರು ಜಗತ್ತನ್ನು ನೋಡಲು ಅವಕಾಶ ಕಲ್ಪಿಸಿಕೊಟ್ಟ ಪುಣ್ಯ ನಮಗೆ ಬರುತ್ತದೆ ಎಂದು ನೇತ್ರದಾನಕ್ಕೆ ಮುಂದಾಗಿ ಮಾದರಿ ವ್ಯಕ್ತಿಯೊಬ್ಬರು ಹೇಳಿದರು.

ಆರೋಗ್ಯ ಕ್ಷೇತ್ರದಲ್ಲಿ ಬಹುತೇಕ ಎಲ್ಲವೂ ಕೃತಕವಾಗಿ ಲಭ್ಯವಾಗುತ್ತಿದೆ. ಆದರೆ, ಕಣ್ಣು ಮತ್ತು ರಕ್ತವನ್ನು ಕೃತಕವಾಗಿ ತಯಾರಿಸಲು ಬರಲ್ಲ. ಹೀಗಾಗಿ ಕಣ್ಣುಗಳ ದಾನವೂ ಅಷ್ಟೇ ಪಾವಿತ್ರ್ಯತೆ ಪಡೆದಿದೆ. ಇಂಥ ಕೆಲಸಕ್ಕೆ ನಾವು ಭಾಗಿಯಾಗಿ ಜನರಲ್ಲಿ ಅರಿವು ಮೂಡಿಸುತ್ತಿರುವುದು ಸಂತಸ ತಂದಿದೆ ಎಂದು ಮಳಿಗೆ ಸಿಬ್ಬಂದಿ ಸುರೇಶ ಪಾಟೀಲ ಹೇಳಿದರು. ಇದುವರೆಗೆ [illegible]

ರಿಯಾಯತಿ ದರದಲ್ಲಿ ಶಸ್ತ್ರಚಿಕಿತ್ಸೆ

ಕಣ್ಣಿನ ರಕ್ಷಣೆ ತಪಾಸಣೆಗಾಗಿ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಲ್ಯಾಸಿಕ್ ಲೇಸರ್ ಶಸ್ತ್ರಚಿಕಿತ್ಸೆ ಕುರಿತು ಈ ಮಳಿಗೆಯಲ್ಲಿ ಮಾಹಿತಿ ನೀಡಲಾಗುತ್ತಿದ್ದು, ರಿಯಾಯತಿ ದರದಲ್ಲಿ ಸಾರ್ವಜನಿಕರಿಗೆ ಲಭ್ಯವಾಗುವ ಸೌಲಭ್ಯ ಕಲ್ಪಿಸಲಾಗಿದೆ. ಬೆಂಗಳೂರು, ಹುಬ್ಬಳ್ಳಿ ಹೊರತುಪಡಿಸಿ ವಿಜಯಪುರದಲ್ಲಿ ಮಾತ್ರ ಕಣ್ಣು ಚಿಕಿತ್ಸೆ ಸೌಲಭ್ಯವಿದ್ದು, ಸಾರ್ವಜನಿಕರಿಗೆ ಹೊರೆಯಾಗದ ರಿಯಾಯತಿ ದರದಲ್ಲಿ ಇದನ್ನು ಒದಗಿಸಲಾಗುತ್ತಿದೆ. ಈ ಕುರಿತು ಇಲ್ಲಿ ಸಮಗ್ರ ಮಾಹಿತಿ ನೀಡಲಾಗುತ್ತಿದೆ.

ಜನರಿಗೆ ನೇತ್ರದ ಸಂರಕ್ಷಣೆ ಅಗತ್ಯವಿದೆ. ಈ ಕುರಿತು ಅವರಲ್ಲಿ ಅರಿವು ಮೂಡಿಸಬೇಕಿದೆ. ನೇತ್ರದಾನ ಶ್ರೇಷ್ಠ ದಾನವಾಗಿದೆ. ಕಣ್ಣು ದಾನ ಮಾಡುವ ಮೂಲಕ ಇಬ್ಬರು ಅಂಧರಿಗೆ ಬೆಳಕು ನೀಡಬಹುದು. ಹೀಗಾಗಿ ಹೆಚ್ಚು ಹೆಚ್ಚು ಜನರು ನೇತ್ರ ದಾನ ಮಾಡಲು ಮುಂದಾಗಬೇಕು. ಜಾತಿ ಧರ್ಮ, ದೃಷ್ಟಿ ಎಂಬಂತೆ ಆದರೆ, ನೇತ್ರದಾನ ನಡೆಯಬೇಕು ನಿರಂತರ.
| ಡಾ. ಪ್ರಭುಗೌಡ ಲಿಂಗದಳ್ಳಿ
ಅನುಗ್ರಹ ಕಣ್ಣಿನ ಆಸ್ಪತ್ರೆ

ವಿಜಯವಾಣಿ ತಂಡ: ರವೀಂದ್ರ ಎಸ್.ದೇಶಮುಖ, ಪರಶುರಾಮ ಭಾಸಗಿ, ಹೀರಾನಾಯ್ಕ ಟಿ., ಬಸಪ್ಪ ಕುಂಬಾರ, ಮಹೇಶ ಮನ್ನಯ್ಯನವರಮಠ, ಗುರಪ್ಪ ಲೋಕುರಿ ಚಿತ್ರಗಳು: ಸಂದೀಪ ಕುಲಕರ್ಣಿ ವಿನ್ಯಾಸ: ಪ್ರಸನ್ನ ಕುಲಕರ್ಣಿ